# ಗರ್ಭಧಾರಣೆ ವೇಳೆಯಲ್ಲಿನ ಅಪಾಯ ಸಂಕೇತಗಳು

### ಪರಿಚಯ

- ಗರ್ಭಾವಸ್ಥೆಯಲ್ಲಿ ಹೆಚ್ಚಿನ ಮಹಿಳೆಯರಿಗೆ ಯಾವುದೇ ಗಂಭೀರವಾದ ಸಮಸ್ಯೆಗಳಿರುವುದಿಲ್ಲ. ಎದೆಯುರಿ, ಬೆನ್ನು ನೋವು, ಸ್ಥನಗಳು ಮೃದುವಾಗುವುದು, ಸ್ಥನಗಳಲ್ಲಿ ಕೀವು ತುಂಬುವುದು ಹಾಗೂ ಆಯಾಸವಾಗುವುದು–ಸಾಮಾನ್ಯವಾದ ಅನಾನುಕೂಲತೆಗಳಾಗಿವೆ.



- ಹಾಗಿದ್ದರೂ, ಗರ್ಭಾವಸ್ಥೆ ಮತ್ತು ಮಗುವಿನ ಜನನ ವೇಳೆಯಲ್ಲಿ ಕೆಲವೊಂದು ಸಮಸ್ಯೆಗಳು ಉಂಟಾಗಬಹುದು ಹಾಗೂ ಇದರಿಂದಾಗಿ ತಾಯಿ/ಮಗು ಅಥವಾ ಇಬ್ಬರಿಗೂ ಜೀವಕ್ಕೆ ಮಾರಕವಾಗುವಂತಹ ತೊಂದರೆಗಳು ಉಂಟಾಗಬಹುದು.
- ಒಂದು ವೇಳೆ ಪ್ರಸವ–ಪೂರ್ವದ ತನಿಖೆ ತಪಾಸಣೆಗಳನ್ನು ನಿರಂತರವಾಗಿ ಮಾಡಿಸಿಕೊಂಡಲ್ಲಿ ಮಹಿಳೆಯಲ್ಲಿರುವ ಕೆಲವೊಂದು ಸಮಸ್ಯೆಗಳನ್ನು ಆರಂಭದಲ್ಲೇ ಕಂಡು ಹಿಡಿಯಬಹುದು.
- ಇಂತಹ ಅಪಾಯದ ಸಂಕೇತಗಳನ್ನು ಅರಿತುಕೊಂಡಲ್ಲಿ, ಗರ್ಭಿಣಿಗೆ ಯಾವಾಗ ವಿಶೇಷ ಆರೈಕೆ ಅಗತ್ಯವಿರುತ್ತದೆ ಎಂದು ಅಂಗನವಾಡಿ ಕಾರ್ಯಕರ್ತೆಗೆ ತಿಳಿಯುತ್ತದೆ ಮತ್ತು ಅವಳು ಗರ್ಭಿಣಿಯನ್ನು ಸಕಾಲದಲ್ಲಿ ವೈದ್ಯರ ಬಳಿಗೆ ಕರೆದುಕೊಂಡು ಹೋಗಿ ಸೂಕ್ತವಾದ ಚಿಕಿತ್ಸೆ ಒದಗಿಸಬಹುದು.
- ಒಂದು ವೇಳೆ ಸಕಾಲದಲ್ಲಿ ಚಿಕಿತ್ಸೆ ಪಡೆಯದಿದ್ದಲ್ಲಿ, ತಾಯಿ/ಮಗು ಅಥವಾ ಇಬ್ಬರ ಮರಣ ಅಥವಾ ಅಂಗವಿಕಲತೆ ಉಂಟಾಗಬಹುದು.
- ಅಪಾಯ ಸಂಕೇತಗಳನ್ನು ಹೊಂದಿರುವ ಗರ್ಭಿಣಿಯನ್ನು ಸೂಕ್ತ ಸಲಹೆ ಪಡೆಯುವುದಕ್ಕಾಗಿ ಫೀಲ್ಡ್ ರೆಫರಲ್ ಯುನಿಟ್/ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು.

### *ಈ ಕೆಳಗಿನವರುಗಳಿಗೆ ಗರ್ಭಾವಸ್ಥೆ ವೇಳೆಯಲ್ಲಿ ಅಪಾಯಗಳ ಸಾಧ್ಯತೆಗಳು ಹೆಚ್ಚಾಗಿರುತ್ತವೆ*

- ಕಡಿಮೆ ಎತ್ತರ ಹೊಂದಿರುವ (ಕುಳ್ಳಗಿನ) ಮಹಿಳೆಯರಿಗೆ (145 ಸೆಮೀ ಅಥವಾ 4 ಅಡಿ 10 ಇಂಚು ಹೊಂದಿರುವವರಿಗೆ).
- 18 ವರ್ಷಕ್ಕಿಂತ ಕೆಳಗಿನವರಿಗೆ ಮತ್ತು 35 ವರ್ಷಕ್ಕೆ ಮೇಲ್ಪಟ್ಟವರಿಗೆ.
- ಹೃದಯದ ಖಾಯಿಲೆಗಳು, ಡಯಾಬಿಟಿಸ್, ಟಿ.ಬಿ, ಮಲೇರಿಯಾ, ರಕ್ತಹೀನತೆ ಮೊದಲಾದ ವೈದ್ಯಕೀಯ ಸಮಸ್ಯೆಗಳ ಇತಿಹಾಸ ಹೊಂದಿರುವವರಿಗೆ ಮತ್ತು ಇನ್ನಿತರ ವೈದ್ಯಕೀಯ ಸಮಸ್ಯೆಗಳು ಇರುವವರಿಗೆ.
- ಮೊದಲನೇ ತ್ರೈಮಾಸಿಕದಲ್ಲಿ 38 ಕಿಲೋಗಿಂತ ಕಡಿಮೆ ತೂಕ ಹೊಂದಿರುವವರಿಗೆ.
- ಹಿಂದಿನ ಗರ್ಭಧಾರಣೆಯಲ್ಲಿ ಸಮಸ್ಯೆ ಹೊಂದಿರುವವರಿಗೆ (ಪ್ರಸವ ತೊಂದರೆ ಇತಿಹಾಸ ಹೊಂದಿರುವವರು ಅಥವಾ ಹಿಂದಿನ ಬಾರಿ ಸಿಸೇರಿಯನ್ ಹೆರಿಗೆ ಮಾಡಿಸಿಕೊಂಡವರಿಗೆ).
- ಗರ್ಭಾವಸ್ಥೆಯಲ್ಲಿ ಮಲೇರಿಯಾ ಹೊಂದಿರುವವರಿಗೆ.
- ಭ್ರೂಣ ದುರ್ಬಲವಾಗಿರುವವರಿಗೆ ಅಥವಾ ಭ್ರೂಣ ಚಲನೆ ಇಲ್ಲದಂತಾದವರಿಗೆ.
- ಪ್ರಸಕ್ತ ಗರ್ಭಧಾರಣೆಯಲ್ಲಿ ಈ ಕೆಳಗಿನ ಸಮಸ್ಯೆ ಹೊಂದಿರುವವರಿಗೆ:
  - ಗರ್ಭಾವಸ್ಥೆ ಯಾವುದೇ ಸಮಯದಲ್ಲಿ ರಕ್ತಸ್ರಾವವಾಗುವುದು.
  - ಹೊಟ್ಟೆ ಅಸಾಮಾನ್ಯ ರೀತಿಯಲ್ಲಿ ಕಂಡು ಬರುವುದು.
  - ರಕ್ತ ಒತ್ತಡ ಸಮಸ್ಯೆ.
  - ತೀವ್ರವಾದ ರಕ್ತಹೀನತೆ.
  - ಅವಳಿ ಜವಳಿ ಜನಿಸುವುದು, ಗರ್ಭಕೋಶದ ತೊಂದರೆಗಳು.

## ಅಪಾಯ ಚಿಹ್ನೆಗಳು

| | |
|---|---|
| **ಗರ್ಭಾವಸ್ಥೆ ಅಥವಾ ಪ್ರಸವದ ವೇಳೆಯಲ್ಲಿ ರಕ್ತ ಸ್ರಾವವಾಗುವುದು–**<br>• ಗರ್ಭಾವಸ್ಥೆಯಲ್ಲಿ ರಕ್ತ ಸ್ರಾವವಾಗುವುದು ಅಥವಾ ಪ್ರಸವದ ವೇಳೆಯಲ್ಲಿ/ಪ್ರಸವದ ಬಳಿಕ ಅತಿಯಾಗಿ ರಕ್ತ ಸ್ರಾವವಾಗುವುದರಿಂದಾಗಿ ತಾಯಿಗೆ ಮತ್ತು/ಅಥವಾ ಮಗುವಿನ ಜೀವಕ್ಕೆ ಅಪಾಯವಾಗುವ ಸಂಭವ ಕೂಡಾ ಇರುತ್ತದೆ.<br>• ಅಂತಹ ಮಹಿಳೆಯನ್ನು ತಕ್ಷಣವೇ ಆಸ್ಪತ್ರೆಗೆ ಸೇರಿಸಬೇಕು. |  |
| **ತೀವ್ರವಾದ ರಕ್ತಹೀನತೆ ಹಾಗೂ ಉಸಿರಾಡಲು ಕಷ್ಟವಾಗುವ ಸ್ಥಿತಿ ಇರುವುದು ಅಥವಾ ಇಲ್ಲದಿರುವುದು–**<br>• ತೀವ್ರವಾದ ರಕ್ತಹೀನತೆ ಹೊಂದಿರುವ ಮಹಿಳೆಯರಲ್ಲಿ ಕಣ್ಣಿನ ರೆಪ್ಪೆಗಳು, ಉಗುರುಗಳು ಮತ್ತು ಅಂಗೈಗಳು ಕಳೆಗುಂದಿರುತ್ತವೆ. ಅವರಲ್ಲಿ ಉಸಿರಾಡಲು ಕಷ್ಟವಾಗುವಂತಹ ಸ್ಥಿತಿ ಇರಬಹುದು ಅಥವಾ ಇಲ್ಲದಿರಬಹುದು.<br>• ಇದರಿಂದಾಗಿ ಮಗುವಿನ ಜನನ ವೇಳೆಯಲ್ಲಿ ಹೃದಯ ವೈಫಲ್ಯತೆ, ಅವಧಿಗೆ ಮುಂಚೆ ಮಗುವಿನ ಜನನ ಹಾಗೂ ಗರ್ಭಾವಸ್ಥೆ ಅವಧಿಯಲ್ಲಿ ಸೋಂಕುಗಳು ಮೊದಲಾದ ಅನೇಕ ಇತರ ತೊಂದರೆಗಳು ಉಂಟಾಗಬಹುದು.<br>• ತೀವ್ರವಾದ ರಕ್ತಹೀನತೆ ಹೊಂದಿರುವ ಮಹಿಳೆಗೆ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಬೇಕು. |  |
| **ಗರ್ಭಾವಸ್ಥೆ ಅಥವಾ ಪ್ರಸವದ ಒಂದು ತಿಂಗಳ ಒಳಗಾಗಿ ಅಧಿಕ ಜ್ವರ ಬರುವುದು–**<br>• ಇಂತಹ ಪರಿಸ್ಥಿತಿಯಲ್ಲಿ ಆಕೆಯನ್ನು ತಕ್ಷಣವೇ ಆಸ್ಪತ್ರೆಗೆ ಸೇರಿಸಬೇಕು.<br>• ಅಧಿಕವಾಗಿ ಜ್ವರ ಬಂದಿದ್ದಲ್ಲಿ, ಮಹಿಳೆಗೆ ಯಾವುದೋ ಸೋಂಕು ತಗುಲಿದೆ ಎಂದು ತಿಳಿಯಬೇಕು ಇದು ಬೆಳೆಯುತ್ತಿರುವ ಮಗುವಿಗೆ ಅಪಾಯವಾಗಿರುತ್ತದೆ.<br>• ಸಂಚಾರದ ವೇಳೆಯಲ್ಲಿ ಮಹಿಳೆಯು ಸಾಕಷ್ಟು ಬೆಚ್ಚಗಿರಬೇಕು.<br>• ಜ್ವರವನ್ನು ಕಡಿಮೆ ಮಾಡುವುದಕ್ಕಾಗಿ ಒದ್ದೆ ಬಟ್ಟೆ, ತೇವವಾಗಿರುವ ಸ್ಪಂಜ್ ಉಪಯೋಗಿಸಬಹುದಾಗಿದೆ. |  |
| **ತಾನೇ ತಾನಾಗಿ ನಗುವುದು ಅಥವಾ ಫಿಟ್ಸ್, ದೃಷ್ಟಿ ಮಂದವಾಗುವುದು, ತಲೆ ನೋವು ಕಾಲಿನಲ್ಲಿ ಏಕ್‌ದಂ ಕೀವು ತುಂಬುವುದು–**<br>• ಈ ಪರಿಸ್ಥಿತಿಯಿಂದಾಗಿ ಮೆದುಳು ಹಾಳಾಗಬಹುದು/ ತಾಯಿಯ ಅಥವಾ ಇನ್ನೂ ಜನಿಸದ ಮಗುವಿನ ಮರಣವಾಗಬಹುದು.<br>• ಇಂತಹ ಪರಿಸ್ಥಿತಿಯಲ್ಲಿ ತಾಯಿಯನ್ನು ಆದಷ್ಟು ಬೇಗನೆ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು. |  |
| **12 ಗಂಟೆಗಳಿಗಿಂತ ಹೆಚ್ಚು ಸಮಯದ ವರೆಗೆ ಹೆರಿಗೆ ನೋವು ಇರುವುದು–**<br>• ಇಂತಹ ಮಹಿಳೆಯನ್ನು ತಕ್ಷಣವೇ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು.<br>• ಮಹಿಳೆಯ ಹೆರಿಗೆಯನ್ನು ಡಾಕ್ಟರರ ಮೇಲ್ವಿಚಾರಣೆಯಲ್ಲಿ ನಡೆಸಬೇಕು. |  |
| **ಹೆರಿಗೆ ನೋವು ಇಲ್ಲದೆಯೇ ನೀರಿನ ಚೀಲ ಒಡೆಯುವುದು–**<br>• ನೀರಿನ ಚೀಲ ಒಡೆದಲ್ಲಿ ತಾಯಿಗೆ ಮತ್ತು ಮಗುವಿಗೆ ಸೋಂಕು ತಗುಲಬಹುದಾದ ಅಪಾಯ ಹೆಚ್ಚಾಗಿರುತ್ತದೆ.<br>• ಇಂತಹ ಮಹಿಳೆಯನ್ನು ತಕ್ಷಣವೇ ಆಸ್ಪತ್ರೆಗೆ ಸೇರಿಸಬೇಕು.<br>• ಮಹಿಳೆಯ ಹೆರಿಗೆಯನ್ನು ಡಾಕ್ಟರರ ಮೇಲ್ವಿಚಾರಣೆಯಲ್ಲಿ ನಡೆಸಬೇಕು. |  |